ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ
*ನಂಬಿಕೆಗೂ, ಮೂಢನಂಬಿಕೆಗೂ ಏನು ವ್ಯತ್ಯಾಸ?*



ಸಚಿವರು ಆಶ್ವಾಸನೆ ನೀಡುತ್ತಾರೆ ಎಂಬುದು ನಂಬಿಕೆ; ನುಡಿದಂತೆಯೇ ನಡೆಯುತ್ತಾರೆ ಎಂದುಕೊಳ್ಳುವುದು ಮೂಢನಂಬಿಕೆ!

ಮಹೇಶ್ ಸಾನಬಾಳ, ಮಸ್ಕಿ
*ಈ ಯುವಕರು ಹಾಲು ಕುಡಿಯುವುದನ್ನು ಬಿಟ್ಟು ಆಲ್ಕೋಹಾಲು ಕುಡಿಯುತ್ತಾರಲ್ಲಾ, ಯಾಕೆ?*
ಪುಷ್ಟಿಗಿಂತಲೂ ತುಷ್ಟಿಯತ್ತ ಮನ ವಾಲುವುದರಿಂದ!

ಚೈತ್ರಾ ಕುಕ್ಕೆಮನೆ, ಬೆಂಗಳೂರು
*ಇಲ್ಲೊಬ್ಬ ನೀವು ಸಿಂಗಲ್ಲಾ, ಡಬಲ್ಲಾ ಎಂದು ಕೇಳುತ್ತಿದ್ದಾನಲ್ಲಾ, ಏನಿದರ ಅರ್ಥ ಗುರೂ?*
ಇಡ್ಲಿ ಹೋಟೆಲ್ ಇಟ್ಟಿದ್ದಾನಂತೆ; ಅದು ಅವನ ನಿತ್ಯ ರಾಗ.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ಈ ರಾಜಕಾರಣಿಗಳಲ್ಲೇಕೆ ಅನೈತಿಕ ಸಂಬಂಧಗಳು ಜಾಸ್ತಿ ಇರುತ್ತವೆ?*



ಕೊಳೆತ ವಸ್ತುಗಳಿಗೆ ಹುಳು ಬೀಳುವುದು ಸಹಜ!

ಕುಬೇರಪ್ಪ ಎಂ. ವಿಭೂತಿ, ಹರಿಹರ
*ವಿಶ್ವದಲ್ಲಿ ಮೊದಲು ಲವ್ ಮ್ಯಾರೇಜ್ ಆದ ವ್ಯಕ್ತಿ ಕೃಷ್ಣ ಪರಮಾತ್ಮನಂತೆ; ಹೌದಾ ಗುರುವೆ?*
ಅವನು ಹುಟ್ಟುವುದಕ್ಕೆ ಮೊದಲೇ ಶಂತನು ಡಬಲ್ ಲವ್ ಮ್ಯಾರೇಜ್ ಮಾಡಿಕೊಂಡಿದ್ದನಲ್ಲಾ – ಗಂಗೆ, ಮತ್ಸ್ಯಗಂಧಿ!

ಬೋ.ಪಾ.ವೆಂಕಟೇಶ್, ಬೋಧನಹೊಸಹಳ್ಳಿ
*ಮಾನವ ಜನ್ಮಕ್ಕೂ, ನರಿ ಜನ್ಮಕ್ಕೂ ಇರುವ ಅಂತರವೇನು?*
ಜಾತಿ ಎಂದು ಬಡಿದಾಡುವ ನರಜನ್ಮಕ್ಕಿಂತ ಜಾತಿರಹಿತ ನರಿ ಜನ್ಮವೇ ಮೇಲು!

ದೇಶವಳ್ಳಿ ಶಿವು, ಸಂತೇಮರಹಳ್ಳಿ
*ನಮ್ಮಲ್ಲಿ ದೇಶಪ್ರೇಮಕ್ಕಿಂತ ಜಾತಿಪ್ರೇಮವೇ ಹೆಚ್ಚಾಗಿದೆಯಲ್ಲಾ, ಏಕೆ?*
ದೇಶ ಕೇವಲ ಭೂಪಟದಲ್ಲಿ, ಜಾತಿ ಮನಃಪಟಲದಲ್ಲಿ ಇರುವುದರಿಂದ!

ಎನ್.ವಿ. ಶ್ರೀನಿವಾಸ್, ಮೈಸೂರು
*ಕೋಪ ಬಂದಾಗ ಇಂಗ್ಲಿಷಿನಲ್ಲಿ ಮಾತು ಬರುವುದೇಕೆ?*
ಬೈದದ್ದು ಅರ್ಥವಾಗಿಬಿಟ್ಟರೆ ಅನರ್ಥವಾಗಿಬಿಟ್ಟೀತೆಂಬ ಭಯ!

ಎಸ್.ಎನ್.ಮಹಾಬಲರಾವ್, ಎನ್ಆರ್‌ಪುರ
*ಹುಡುಗಿಯರು ಕೋತಿಗಳನ್ನು ಲವ್ ಮಾಡುವುದೇಕೆ?*
ಏಕೆಂದರೆ ಅವರಿಗೆ ಬೇಕಾದ ರೀತಿ ಕುಣಿವುದು ಕೋತಿ!

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು
*ಇಬ್ಬರು ಹೆಂಗಸರು ಮಾತಿಗೆ ಶುರು ಮಾಡಿದರೆ ಕೊನೆಯಿದೆಯೆ?*
ಕನ್ನಡಿ ಮುಂದಿಡಿ; ಮಾತು ಬಂದ್!

ಅಮರಯ್ಯ, ಕಬಾಡಿಗೇರಾ
*ಕೆಲವರ ನಾಲಿಗೆ ಗರಗಸದಂತೆ ಹರಿತವಾಗಿರುತ್ತದಲ್ಲಾ...?*
ಸಭ್ಯತೆಯ ಆಯಿಲ್ ಹಾಕಿದರೆ ಸ್ಮೂತ್ ಆಗುತ್ತದಂತೆ!

ಸಿ.ನಾಗರಾಜ, ಅರದೊಟ್ಟ್ಲು
*ಮುತ್ತಿಗೂ, ಬುತ್ತಿಗೂ ಸಂಬಂಧವೇನು?*
ಎರಡೂ ಮನೆಯದ್ದೇ ಶ್ರೇಷ್ಠ; ಹೊರಗಿನದಾದರೆ ರೋಗಸಂಭವ!

ಬಿ.ಎನ್. ಸೊಲ್ಲಾಪುರ, ಬೀದರ
*ರಾವಣ ಸೀತೆಗೆ ತೊಂದರೆಯಾಗದಂತೆ ಅಶೋಕವನದಲ್ಲಿಟ್ಟ. ರಾಮ ತುಂಬುಗರ್ಭಿಣಿಯನ್ನು ಕಾಡಿಗಟ್ಟಿದ. ಯಾರು ಒಳ್ಳೆಯವರು?*
ರಾಮನೇ! ಚೊಚ್ಚಲ ಗರ್ಭಿಣಿಯನ್ನು ತವರಿಗೆ ಕಳುಹಿಸುವುದು ನಮ್ಮ ಸತ್ಸಂಪ್ರದಾಯ. ಮಣ್ಣಿನ ಮಗಳಿಗೆ ಮಣ್ಣುಭರಿತ ಕಾಡೇ ತವರು!

## ಬಹುಮಾನಿತ ಪ್ರಶ್ನೆ

ರತ್ನಾ ಅಶೋಕ ಗೊರವರ, ನವಲಗುಂದ
*ಹೋದ ಪ್ರಾಣ, ಮಾನ ಮತ್ತೆ ಬರುವಂತಿದ್ದರೆ?*
ಆಗಾಗ್ಗೆ ಕಳೆದುಕೊಳ್ಳಬಹುದು!

ಎಂ.ವಿ. ವೆಂಕಮ್ಮ, ಬಳ್ಳಾರಿ
*ಯೋಗ್ಯತೆಗೂ, ಯೋಗಕ್ಕೂ ಏನು ವ್ಯತ್ಯಾಸ?*
ನೆಹರೂ ಪ್ರಧಾನಿ ಆದದ್ದು ಯೋಗ್ಯತೆ; ರಾಹುಲ್ ಆದರೆ ಯೋಗ!

ಸಯ್ಯದ್ ಭಾಷಾ, ಕುರುವಳ್ಳಿ
*ಮನುಷ್ಯನಿಗೆ 'ಸಾಕು' ಎನ್ನುವ ವಸ್ತು ಯಾವುದು?*
ಸಾಕು ಪ್ರಾಣಿಗಳು...!

ಜೆ. ಪ್ರದೀಪಕುಮಾರ್, ಹಿರೇಸಿಂದೋಗಿ
*ನಮ್ಮ ಯೋಗ್ಯತೆಗೆ ತಕ್ಕಂತೆ ಬಾಳುವುದು ಹೇಗೆ?*
ಆದಾಯ ಹೆಚ್ಚಿಸಿಕೊಂಡು ಅಥವಾ ಯೋಗ್ಯತೆ ಇಳಿಸಿಕೊಂಡು!

ಬಿ. ಚಂದ್ರೇಗೌಡ, ಬೆಂಗಳೂರು
*ಮನೆಗೆ ಮಗನಾಗಲಿಲ್ಲ, ಸ್ಮಶಾನಕ್ಕೆ ಹೆಣವಾಗಲಿಲ್ಲ ಅಂದ್ರೆ ಏನರ್ಥ?*



ಸದನದಲ್ಲಿ ಮಂತ್ರಿಯಾದ ಎಂದು!

ನೇ.ಗೋ.ಭ, ಕುಕ್ಕೆಸುಬ್ರಹ್ಮಣ್ಯ
*ನಾವು ಕೇಳುತ್ತಿರುವುದು ಸುಧಾ; ನೀವು ಕೊಡುತ್ತಿರುವುದು ಏನು ರಾಮ್‌ಜೀ?*
ಸು–ಧಾರಣೆ, ಸುಧಾರಣೆ!

ಪವಿತ್ರ ಆರ್. ಹೆಗ್ಡೆ, ತೋರಣಗಲ್ಲು
*ಎಲ್ಲ ಟಿ.ವಿ. ಸೀರಿಯಲ್‌ಗಳಲ್ಲಿ ಹೆಂಗಸರೇ ವಿಲನ್; ಯಾಕೆ?*
ಕಥೆ, ನಿರ್ದೇಶನ ಗಂಡಸರದೇ ಆದ್ದರಿಂದ!

ರಾಮ್